**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 11.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ತಂದೆ ದಿಃ15/02/1992 ರಂದು ತೀರಿಕೊಂಡಿರುತ್ತಾರೆ. ನನ್ನ ತಂದೆಯ ತಂದೆ ಹೆಸರು ಹನಮಂತಪ್ಪ ತಮ್ಮಣ್ಣ ಮುಳಗುಂದ ಆಗಿರುತ್ತದೆ. ಉಣಕಲ್ ಸರ್ವೆ ನಂ.750/1 ಆಸ್ತಿ ಭೀಮಪ್ಪ ಮುಳಗುಂದ ಮತ್ತು ರಾಮಪ್ಪ ಮುಳಗುಂದ ಇಬ್ಬರಿಗೆ ಹಂಚಿಕೆಯಾಯಿತು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಭೀಮಪ್ಪನ ವಾರಸಾ ನಾತೆಯಿಂದ ನನ್ನ ಹಿಸ್ಸೆಗೆ 1 ಎಕರೆ 28 ಗುಂಟೆ ಜಮೀನು ಬಂದಿರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ಉಣಕಲ್ ಸರ್ವೆ ನಂ.750/1 ರಲ್ಲಿ ವಾರಸಾ ನಾತೆಯಿಂದ ಹೆಸರು ದಾಖಲಿಸಲು ಅರ್ಜಿ ನೀಡಿರುತ್ತೇವೆ ಎಂದರೆ ಸರಿ. ನಿಪಿ.4 ರಲ್ಲಿ ಭೀಮಪ್ಪನ ಎಲ್ಲ ವಾರಸುದಾರರ ಹೆಸರುಗಳಿವೆ ಎಂದರೆ ಸರಿ. ನಿಪಿ.4 ರ ಪ್ರಕಾರ ವಾರಸಾ ಮಾಡಲು ಅರ್ಜಿಯನ್ನು ಮಾರುತಿ ತಂದೆ ಭೀಮಪ್ಪ ಮುಳಗುಂದ ಇವರು ನೀಡಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಅಕ್ಕ ತಂಗಿಯರ ಒಪ್ಪಿಗೆ ಪಡೆದುಕೊಂಡೆ ಅರ್ಜಿ ನೀಡಿರುತ್ತಾರೆಂದು ಎಂದು ನುಡಿಯುತ್ತಾರೆ. ಸದರಿ ಒಪ್ಪಿಗೆ ಪತ್ರ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಿರಾ ಎಂದರೆ ಸಾಕ್ಷಿ ಎಲ್ಲ ಕಾಗದಗಳನ್ನು ವಕೀಲರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.4 ರ ಪ್ರಕಾರ ಗಂಡು ಮಕ್ಕಳಿಗೆ ಮಾತ್ರ ಹನಮಂತ ದೇವರ ದೇವಸ್ಥಾನ ಪೂಜೆ ಮಾಡಿ ಮುಂದುವರೆಸಿಕೊಂಡು ಹೋಗುವ ಆಸ್ತಿ ಎಂದು ಬರೆದಿಲ್ಲ ಎಂದರೆ ಸಾಕ್ಷಿ ನಾವು ಟ್ರಸ್ಟ ಕಮಿಟಿ ಕಾಗದವನ್ನು ನೀಡಿರುತ್ತೇವೆಂದು ನುಡಿಯುತ್ತಾರೆ. ನಾವು ಸದರಿ ಆಸ್ತಿಯಲ್ಲಿ ಹೆಣ್ಣು ಮಕ್ಕಳು ಒಪ್ಪಿಗೆ ನೀಡಿರುತ್ತಾರೆಂದು ಯಾವುದೇ ದಾಖಲೆ ಕೊಟ್ಟ ಬಗ್ಗೆ ಉಲ್ಲೇಖ ಇಲ್ಲ ಹಾಗೂ ಆ ರೀತಿ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಉಣಕಲ್ ಸರ್ವೆ ನಂ.750/1 ನನ್ನ ತಂದೆ ತೀರಿಕೊಳ್ಳುವವರೆಗೂ ಅವರ ಹೆಸರಿನಲ್ಲಿಯೇ ಇತ್ತು ಎಂದರೆ ಸರಿ. ನನ್ನ ತಂದೆ ಜೀವಂತವಿರುವಾಗ ಸದರಿ ಆಸ್ತಿ ಯಾರಿಗೆ ಹೋಗಬೇಕು ಎಂದು ಯಾವುದೇ ನೊಂದಾಯಿತ ದಾಖಲೆ ಬರದು ನೀಡಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನೊಂದಣಿ ಮಾಡುವ ಪದ್ಧತಿ ಇರಲಿಲ್ಲ ಎಂದು ನುಡಿಯುತ್ತಾರೆ. ಉಣಕಲ್ ಸರ್ವೆ ನಂ.750/1 ಭೀಮಪ್ಪನ ಎಲ್ಲ ವಾರಸುದಾರರಿಗೆ ಸಮಾನ ಹಿಸ್ಸೆ ಇದೆ ಎಂದರೆ ಸಾಕ್ಷಿ ಅದು ಹನಮಂತ ದೇವರ ಆಸ್ತಿ ಎಂದು ನುಡಿಯುತ್ತಾರೆ.

2. ನನ್ನ ತಮ್ಮ ಅಸಲು ದಾವಾ ನಂ.309/1988 ಎಂಬ ದಾವೆ ಸಲ್ಲಿಸಿದ್ದರು. ಸದರಿ

ದಾವೆಯಲ್ಲಿ ನಾನು ಪ್ರತಿವಾದಿ ನಂ.4 ಆಗಿದ್ದೇನು. ಸದರಿ ದಾವೆಯಲ್ಲಿ ಸರ್ವೆ ನಂ.197/ಸಿ ಆಸ್ತಿಯನ್ನು ಮಾತ್ರ ಹಂಚಿಕೊಂಡಿರುತ್ತಿರಿ ಎಂದರೆ ಸಾಕ್ಷಿ ಹಂಚಿಕೊಂಡಿಲ್ಲ ಆದರೆ ನ್ಯಾಯಾಲಯದಿಂದ ಕೊಡಲಾಗಿದೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಹೇಳಿದ ಪ್ರಕಾರ ನಾವು ಸದರಿ ಆಸ್ತಿಯಲ್ಲಿ ಹಿಸ್ಸೆ ಪಡೆದುಕೊಂಡಿರುತ್ತೇವೆ. ಸದರಿ ದಾವೆಯಲ್ಲಿ ಎಲ್ಲ ಆಸ್ತಿಗಳನ್ನು ಸೇರಿಸಿ ಎಂದು ನೀವು ನಿಮ್ಮ ತಮ್ಮನಿಗೆ ಹೇಳಲಿಲ್ಲವಾ ಎಂದರೆ ಸಾಕ್ಷಿ ನಾನು ಯಾಕೆ ಹೇಳಲಿ ಅದು ಅವರ ಇಚ್ಛೆ ಎಂದು ನುಡಿಯುತ್ತಾರೆ. ಉಳಿದ ಆಸ್ತಿಗಳನ್ನು ಸಹ ಸದರಿ ದಾವೆಯಲ್ಲಿ ಸೇರಿಸಿ ಎಂದು ನಾನು ಅವರಿಗೆ ಹೇಳಲಿಲ್ಲ. ನೀವು 3 ಜನ ಗಂಡು ಮಕ್ಕಳು ಸೇರಿ ಹೆಣ್ಣು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಈ ರೀತಿ ರಾಜೀ ಪತ್ರ ಮಾಡಿಕೊಂಡಿರಾ ಎಂದರೆ ಸಾಕ್ಷಿ ಸಾಧ್ಯವೇ ಇಲ್ಲ ಎಂದು ನುಡಿಯುತ್ತಾರೆ.

3. ನನಗೆ ಆಂಗ್ಲ ಭಾಷೆ ಓದಲು ಬರುತ್ತದೆ. ನಿಡಿ.9 ರಲ್ಲಿ ನನ್ನ ತಂದೆ ಹೆಸರು ಇದೆ ಹಾಗೂ ಕೆಳಗೆ ನಮ್ಮೆಲ್ಲರ ಹೆಸರು ಇವೆ ಎಂದರೆ ಸರಿ. ನಿಡಿ.9 ರಲ್ಲಿ ತೋರಿಸಿದ ಟ್ರ್ಯಾಕ್ಟರ ಎಲ್ಲರು ಸೇರಿ ಸಾಲ ಮಾಡಿ ಖರೀದಿಸಿದ್ದು ಸದರಿ ಸಾಲವನ್ನು ನಿಮ್ಮ ತಂದೆಯೇ ತೀರಿಸಿರುತ್ತಾರೆಂದರೆ ಸಾಕ್ಷಿ ನಮ್ಮ ತಂದೆ ತೀರಿಸಿಲ್ಲ ಆದರೆ ಅದನ್ನು ನಾವೆಲ್ಲ ಸೇರಿ ತೀರಿಸಿರುತ್ತೇವೆಂದು ಎಂದು ನುಡಿಯುತ್ತಾರೆ.

4. ನಿಡಿ.36 ರಲ್ಲಿ ಸರ್ವೆ ನಂಬರ ನಮೂದಿಸಿಲ್ಲ ಎಂದರೆ ಸಾಕ್ಷಿ ನನಗೆ ಚಿಕ್ಕ ಅಕ್ಷರಗಳು ಸರಿಯಾಗಿ ಕಾಣಿಸುವುದಿಲ್ಲ ನನಗೆ ಕಣ್ಣು ಆಪರೇಶನ್ ಬಂದಿದೆ ಅದಾದ ನಂತರ ಕಾಣುತ್ತದೆ ಅಥವಾ ಇಲ್ಲ ಎಂದು ನೋಡಬೇಕು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಹಾಜರಪಡಿಸುವಾಗ ನೀವು ಅದರಲ್ಲಿ ಸರ್ವೆ ನಂಬರ ಇದೆ ಅಥವಾ ಇಲ್ಲ ಎಂದು ನೋಡಿ ಹಾಜರಪಡಿಸಿಲ್ಲವಾ ಎಂದರೆ ಸಾಕ್ಷಿ ನನಗೆ ಅದರಲ್ಲಿರುವ ಅಕ್ಷರ ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.36 ರಲ್ಲಿ ಸರ್ವೆ ನಂಬರ ಇರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ನಂಬರ ಇಲ್ಲದೇ ಕಾಗದ ಹೇಗೆ ತಯಾರು ಮಾಡುತ್ತಾರೆಂದು ನುಡಿಯುತ್ತಾರೆ. ನಿಡಿ.37 ಟ್ರಸ್ಟ ಕಮಿಟಿ ರಜಿಸ್ಟರ್ ಆಗಿರುತ್ತದೆ. ಸದರಿ ದಾಖಲೆಯಲ್ಲಿ ಸಹ ಸರ್ವೆ ನಂಬರನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.37 ರಲ್ಲಿ ಹನಮಂತಪ್ಪ ತಮ್ಮಣ್ಣ ಮುಳಗುಂದ ಇವರ ಹೆಸರಿನಲ್ಲಿ 1953 ರಲ್ಲಿ ಟ್ರಸ್ಟ ಇದ್ದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ನಿಡಿ.38 ದಾಖಲೆಯಲ್ಲಿ ಸಹ ಸರ್ವೆ ನಂಬರನ್ನು ನಮೂದಿಸಿಲ್ಲ ಎಂದರೆ ಸರಿ. ನಿಡಿ.36 ರಿಂದ 38 ದಾಖಲೆಗಳಿಗೂ ಹಾಗೂ ಸರ್ವೆ ನಂ.750/1 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ.36 ರಲ್ಲಿ ನನ್ನ ತಂದೆಯ ಹೆಸರು ಇದೆ ಎಂದರೆ ಸರಿ. ನನ್ನ ತಂದೆ ಇದ್ದಾಗ ಸಾಲ ಮಾಡಿರುತ್ತೇವೆ. ಅವರು ತೀರಿಕೊಂಡ ನಂತರ ಸಾಲವನ್ನು ತೀರಿಸಿರುತ್ತೇವೆಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆ

ಪ್ರಮಾಣಪತ್ರದಲ್ಲಿರುವ ಎಲ್ಲ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ತಂದೆ ತೀರಿಕೊಂಡ ನಂತರ ದಾವೆಯಲ್ಲಿ ತೋರಿಸಿದ ಆಸ್ತಿಗಳನ್ನು ನಾವು ಸಹೋದರರು ಆಪಸಾತ್‌ನಲ್ಲಿ ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆಪಸಾತ್‌ನಲ್ಲಿ ವಾಟ್ನಿ ಪತ್ರದಲ್ಲಿ ನಿಮ್ಮ ಸಹೋದರಿಯರು ಹೆಸರು ಇಲ್ಲ ಹಾಗೂ ಅವರಿಗೆ ಯಾವುದೇ ಆಸ್ತಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಅವರು ತಮಗೆ ಹಿಸ್ಸೆ ಬೇಡ ಹಾಗೂ ಸಾಲವನ್ನು ನೀವೇ ತುಂಬಿ ಹಾಗೂ ಆಸ್ತಿಯನ್ನು ನೀವೇ ತೆಗೆದುಕೊಳ್ಳಿ ಎಂದು ಹೇಳಿದರು. ಈ ಬಗ್ಗೆ ಏನಾದರೂ ಲಿಖಿತವಾದ ದಾಖಲೆ ಇದೆಯಾ ಎಂದರೆ ಸಾಕ್ಷಿ ನಮ್ಮ ಸಹೋದರಿಯರಿಗೆ ನಾವು ಸಾಕಷ್ಟು ಬಾರಿ ಹಣ ನೀಡಿರುತ್ತೇವೆಂದು ನುಡಿಯುತ್ತಾರೆ. ಅವರಿಗೆ ಹಣ ನೀಡಿದ ಬಗ್ಗೆ ನಾನು ನಮ್ಮ ಅಕ್ಕತಂಗಿಯರ ಕಡೆಯಿಂದ ಕಾಗದ ಬರೆಸಿಕೊಂಡಿಲ್ಲ. ನನ್ನ ತಂಗಿ ಯಲ್ಲವ್ವ ಜೀವಂತ ಇದ್ದಾಗಲೂ ದಾವಾ ಆಸ್ತಿಗಳಲ್ಲಿ ಹಿಸ್ಸೆ ಬೇಕು ಎಂದು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಆಕೆ ಸಲ್ಲಿಸಿಲ್ಲ ಆದರೆ ಆಕೆಯ ಗಂಡ ಮತ್ತು ಮಕ್ಕಳು ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ಈ ದಾವೆಯನ್ನು ಬಸಪ್ಪ ಹೊನಕೇರಪ್ಪ ಕರ್ಜಗಿ ಹಾಗೂ ವೆಂಕಪ್ಪ ಬಸವಣ್ಣೆಪ್ಪ ಕರ್ಜಗಿ ಇವರೇ ಹಾಕಿರುತ್ತಾರೆ. ನನ್ನ ತಂಗಿ ಯಲ್ಲವ್ವ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ಯಲ್ಲವ್ವಳ ಹೆಸರು ಇದೆ ಎಂದರೆ ಸಾಕ್ಷಿ. ಸಾಕ್ಷಿ ಮುಂದುವರೆದು ಅವಳ ಹೆಸರು ಇದೆ ಆದರೆ ಕೇಸ್ ಮಾತ್ರ ಅವರು ಹಾಕಿರುತ್ತಾರೆಂದು ನುಡಿಯುತ್ತಾರೆ. ಯಲ್ಲವ್ವಳ ಗಂಡ ಹಾಗೂ ಮಕ್ಕಳು ದಾವೆ ಸಲ್ಲಿಸಿರುತ್ತಾರೆಂದು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಾಕ್ಷಿ ವಿಚಾರಣೆ ಹಂತಕ್ಕೆ ಬಂದಾಗ ಯಲ್ಲವ್ವ ತೀರಿಕೊಂಡಿರುತ್ತಾರೆಂದರೆ ಸರಿ. ನನ್ನ ಸಹೋದರಿ ಯಲ್ಲವ್ವ ಸ್ವಂತಃ ನಮ್ಮ ಹತ್ತಿರ ಬಂದು ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೇಳಿದ್ದು ನಾವು ಕೊಡಲಿಲ್ಲವಾದ ಕಾರಣ ಅವರು ಈ ದಾವೆ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅವರು ಕೇಳಲು ಬಂದಿರಲ್ಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳಿಗೆ ಪೂರಕವಾಗಿ ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**